ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಹ.ಹೆ.ಜಾ.ಶಿ./ಕಿಶೋರಿ/2011-12 ದಿನಾಂಕ: 15-06-2011

# ಸುತ್ತೋಲೆ

**ವಿಷಯ:** ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳನ್ನು ನಡೆಸುವ ಬಗ್ಗೆ
**ಉಲ್ಲೇಖ :** ದಿನಾಂಕ : 28-02-2011 ರಂದು ನವದೆಹಲಿಯಲ್ಲಿ ನಡೆದ ಸರ್ವ ಶಿಕ್ಷಣ ಅಭಿಯಾನ ಯೋಜನಾ ಅನುಮೋದನಾ ಮಂಡಳಿ ಸಭೆ.

*****

ಮೇಲಿನ ವಿಷಯ ಹಾಗೂ ಉಲ್ಲೇಖದನ್ವಯ, 2011-12 ನೇ ಸಾಲಿನಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳನ್ನು ನಡೆಸಲು ರೂ.324 ಲಕ್ಷ ಅನುದಾನ ಮಂಜೂರಾಗಿದೆ; ಈ ಅನುದಾನದಲ್ಲಿ 'ಕೇಳು ಕಿಶೋರಿ' ಮಾಹಿತಿ ಪುಸ್ತಕಗಳ ಮುದ್ರಣಕ್ಕೆ ಅಗತ್ಯವಾದ ರೂ. 8 ಲಕ್ಷ ಮೊತ್ತವನ್ನು ಹೊರತುಪಡಿಸಿ, ರೂ 316 ಲಕ್ಷ ಮೊತ್ತವನ್ನು ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳನ್ನು ನಡೆಸಲು ಉಪಯೋಗಿಸಿಕೊಳ್ಳಬಹುದಾಗಿದೆ. ಶಿಬಿರಗಳನ್ನು ನಡೆಸಲು ಪ್ರತಿ ಬ್ಲಾಕ್‌ಗೆ ರೂ.1.565 ಲಕ್ಷದಂತೆ ಅನುದಾನವನ್ನು ಜಿಲ್ಲೆಯಲ್ಲಿರುವ ಸ.ಶಿ.ಅ.ದ ಲಭ್ಯ ಅನುದಾನದಿಂದ ತಕ್ಷಣ ಬಿಡುಗಡೆ ಮಾಡಲು ಸೂಚಿಸಿದೆ. ಬ್ಲಾಕ್‌ವಾರು ಅನುಮೋದಿತ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

2. ಕಳೆದ ಸಾಲಿನಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳು ಉತ್ತಮವಾಗಿ ಜರುಗಿದ್ದು, ಈ ಸಾಲಿನಲ್ಲಿಯೂ ಉತ್ತಮವಾಗಿ ನಡೆಸಲು ತಿಳಿಸಿದೆ. ಶಿಬಿರಗಳನ್ನು ನಡೆಸಲು ಅಗತ್ಯವಾದ ಮಾರ್ಗಸೂಚಿಯನ್ನು ಅನುಬಂಧ 2 ರಲ್ಲಿ ನೀಡಿದ್ದು, ಅದರಂತೆ ಶಿಬಿರಗಳನ್ನು ಸೆಪ್ಟೆಂಬರ್ 2011 ರೊಳಗೆ ಪೂರೈಸಿ, ಈ ಕಛೇರಿಗೆ ವರದಿ ಮಾಡಲು ಸೂಚಿಸಿದೆ. ಶಿಬಿರಗಳನ್ನು ನಡೆಸದೆ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳದ ಪ್ರಕರಣಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದು.

3. ಶಿಬಿರಗಳನ್ನು ನಡೆಸುವುದಕ್ಕೆ ಮುಂಚೆ ಬ್ಲಾಕ್‌ಗಳಿಂದ ಶಿಬಿರಗಳ ವೇಳಾಪಟ್ಟಿ ಹಾಗೂ ಫಲಾನುಭವಿಗಳ ಪಟ್ಟಿಯನ್ನು ಪಡೆಯಲು ತಿಳಿಸಿದೆ. ಶಿಬಿರಗಳು ಮುಕ್ತಾಯವಾದ ನಂತರ ಪ್ರತಿ ಶಿಬಿರದ ಕನಿಷ್ಠ ಒಂದು ಫೋಟೋ ಒಳಗೊಂಡ ದಾಖಲೀಕರಣವನ್ನು (ಕಿಶೋರಿಯರ ಹಿಮ್ಮಾಹಿತಿ ಸಹಿತ) ಜಿಲ್ಲೆಗಳು ಬ್ಲಾಕ್‌ಗಳಿಂದ ಪಡೆಯುವುದು ಹಾಗೂ ಕ್ರೋಢೀಕೃತ ವರದಿಯನ್ನು (ಉತ್ತಮ ಫೋಟೋಗಳ ಸಹಿತ) ಈ ಕಛೇರಿಗೆ ಸೆಪ್ಟೆಂಬರ್ 2011 ರ ಅಂತ್ಯದೊಳಗೆ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

**ಪ್ರತಿಗಳು**

1. ಎಲ್ಲ ಡಿ.ಡಿ.ಪಿ.ಐ., ಡಯಟ್ ಪ್ರಾಂಶುಪಾಲರು, ಡಿವೈಪಿಸಿ., ಬಿಇಓ, ಬಿಆರ್‌ಸಿ.ಗಳು-ಅಗತ್ಯ ಕ್ರಮಕ್ಕಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ-ಅನುಪಾಲನೆಗಾಗಿ ಕಳುಹಿಸಿದೆ.
3. ಈ ಕಛೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ
4. ಸಹ-ಸಂಪಾದಕರು, ಶಿಕ್ಷಣ ವಾರ್ತೆ-ಪ್ರಕಟಣೆಗೆ

**ಇವರಿಗೆ ಮಾಹಿತಿಗೆ ಸಲ್ಲಿಸಿದೆ :**

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬೆಂಗಳೂರು – ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ತರಲು ಕೋರಿದೆ.

ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು - ೫೬೦ ೦೦೧

*ಅನುಬಂಧ-1*

*2011-12 ನೇ ಸಾಲಿನಲ್ಲಿ 'ಹದಿಹರೆಯದ ಹೆಣ್ಣು ಮಕ್ಕಳ ಜಾಗೃತಿ ಶಿಬಿರ' (ಕಿಶೋರಿ) ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿ*

| ಕ್ರ. ಸಂ | ಜಿಲ್ಲೆ | ಜಿಲ್ಲೆಯಲ್ಲಿರುವ ಶೈಕ್ಷಣಿಕ ಬ್ಲಾಕ್‌ಗಳ ಸಂಖ್ಯೆ | ಹಂಚಿಕೆ ಮಾಡಿದ ಅನುದಾನ (ಪ್ರತಿ ಬ್ಲಾಕ್‌ಗೆ 1.565 ಲಕ್ಷದಂತೆ) | ತರಬೇತಿಗೊಳಪಡಬೇಕಾದ ಕಿಶೋರಿಯರ ಸಂಖ್ಯೆ |
|---|---|---|---|---|
| 1 | ಬೆಂಗಳೂರು ಗ್ರಾ. | 4 | 6.26 | 2780 |
| 2 | ಬೆಂಗಳೂರು ಉತ್ತರ | 4 | 6.26 | 2780 |
| 3 | ಬೆಂಗಳೂರು ದಕ್ಷಿಣ | 5 | 7.82 | 3475 |
| 4 | ಚಿಕ್ಕಬಳ್ಳಾಪುರ | 6 | 9.39 | 4170 |
| 5 | ಚಿತ್ರದುರ್ಗ | 6 | 9.39 | 4170 |
| 6 | ದಾವಣಗೆರೆ | 7 | 10.95 | 4865 |
| 7 | ಕೋಲಾರ | 6 | 9.39 | 4170 |
| 8 | ಮಧುಗಿರಿ | 4 | 6.26 | 2780 |
| 9 | ಶಿವಮೊಗ್ಗ | 7 | 10.95 | 4865 |
| 10 | ತುಮಕೂರು | 6 | 9.39 | 4170 |
| 11 | ರಾಮನಗರ | 4 | 6.26 | 2780 |
| 12 | ಬಾಗಲಕೋಟೆ | 6 | 9.39 | 4170 |
| 13 | ಬೆಳಗಾವಿ | 6 | 9.39 | 4170 |
| 14 | ಬಿಜಾಪುರ | 7 | 10.95 | 4865 |
| 15 | ಚಿಕ್ಕೋಡಿ | 8 | 12.51 | 5560 |
| 16 | ಧಾರವಾಡ | 6 | 9.39 | 4170 |
| 17 | ಗದಗ | 6 | 9.39 | 4170 |
| 18 | ಹಾವೇರಿ | 7 | 10.95 | 4865 |
| 19 | ಉತ್ತರ ಕನ್ನಡ | 11 | 17.21 | 7645 |
| 20 | ಬಳ್ಳಾರಿ | 8 | 12.51 | 5560 |
| 21 | ಬೀದರ್ | 5 | 7.82 | 3475 |
| 22 | ಗುಲ್ಬರ್ಗ | 8 | 12.51 | 5560 |
| 23 | ಕೊಪ್ಪಳ | 4 | 6.26 | 2780 |
| 24 | ರಾಯಚೂರು | 5 | 7.82 | 3475 |
| 25 | ಯಾದಗಿರಿ | 3 | 4.69 | 2085 |
| 26 | ಚಾಮರಾಜನಗರ | 5 | 7.82 | 3475 |
| 27 | ಚಿಕ್ಕಮಗಳೂರು | 8 | 12.51 | 5560 |
| 28 | ದಕ್ಷಿಣ ಕನ್ನಡ | 7 | 10.95 | 4865 |
| 29 | ಹಾಸನ | 8 | 12.51 | 5560 |
| 30 | ಕೊಡಗು | 3 | 4.69 | 2085 |
| 31 | ಮಂಡ್ಯ | 8 | 12.51 | 5560 |
| 32 | ಮೈಸೂರು | 9 | 14.08 | 6255 |
| 33 | ಉಡುಪಿ | 5 | 7.82 | 3475 |
|  | ಒಟ್ಟು | 202 | 316.0 | 140390 |

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಅನುಬಂಧ–2

## 'ಹದಿಹರೆಯದ ಹೆಣ್ಣು ಮಕ್ಕಳ ಜಾಗೃತಿ ಶಿಬಿರ (ಕಿಶೋರಿ) ಕಾರ್ಯಕ್ರಮ ಅನುಷ್ಠಾನಕ್ಕಾಗಿ ಮಾರ್ಗಸೂಚಿ

1. ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳಿಗೆ ಸಂಬಂಧಿಸಿದ ಸಂಪನ್ಮೂಲ ವ್ಯಕ್ತಿಗಳ ತರಬೇತಿಯು ಕಳೆದ 6 ತಿಂಗಳ ಹಿಂದೆ ಆಗಿರುವುದರಿಂದ ಮತ್ತೊಮ್ಮೆ ಸಂಪನ್ಮೂಲ ವ್ಯಕ್ತಿಗಳ ತರಬೇತಿಯ ಅವಶ್ಯಕತೆ ಇರುವುದಿಲ್ಲ ; ವರ್ಗಾವಣೆಯ ಕಾರಣದಿಂದ ಕೆಲವು ಸಂಪನ್ಮೂಲ ವ್ಯಕ್ತಿಗಳು ಬದಲಾವಣೆಯಾಗಿದ್ದರೆ, ಅವರು ಕಾರ್ಯನಿರ್ವಹಿಸುವ ಸ್ಥಳದಿಂದ ಕರೆಸಿ, ಅವರನ್ನು ಶಿಬಿರಗಳನ್ನು ನಡೆಸಲು ತೊಡಗಿಸುವುದು.
2. ಶಿಬಿರಗಳನ್ನು ಹೋಬಳಿ/ಕ್ಲಸ್ಟರ್ ಹಂತದಲ್ಲಿ ಕೈಗೊಳ್ಳುವುದು. ಬ್ಲಾಕ್‌ನಲ್ಲಿ 4–5 ದೊಡ್ಡ ಹೋಬಳಿ/ಗ್ರಾಮಗಳನ್ನು ಗುರುತಿಸಿ, ಶಿಬಿರಗಳನ್ನು ಹಮ್ಮಿಕೊಳ್ಳುವುದು. ಶಿಬಿರಗಳು ಬಿ.ಆರ್.ಸಿ./ಬಿ.ಆರ್.ಪಿ. ಉಸ್ತುವಾರಿಯಲ್ಲಿ ನಡೆಯಬೇಕು.
3. ಪ್ರತಿ ಶಿಬಿರದಲ್ಲಿ ಗರಿಷ್ಟ 50 ಕಿಶೋರಿಯರು ಇರಬೇಕು.
4. ಶಿಬಿರಗಳು ಕಡ್ಡಾಯವಾಗಿ ಸನಿವಾಸವಾಗಿ ನಡೆಯಬೇಕು. ವೆಚ್ಚವು ಪ್ರತಿ ಕಿಶೋರಿಗೆ ಪ್ರತಿ ದಿನಕ್ಕೆ ರೂ.75/– ರಂತೆ ಘಟಕ ವೆಚ್ಚವನ್ನು ನಿಗದಿಪಡಿಸಿದೆ. ಕಿಶೋರಿಯರಿಗೆ ನೈಜ ಪ್ರಯಾಣಭತ್ಯೆ ಪಾವತಿಸಬೇಕು. ಪ್ರತಿ ಕಿಶೋರಿಗೆ ಪ್ರತಿ ದಿನಕ್ಕೆ ರೂ. 75/– ರಂತೆ 50 ಕಿಶೋರಿಯರಿಗೆ ಒಟ್ಟು ವೆಚ್ಚ ರೂ. 11,250/–ರಲ್ಲಿ ಈ ಕೆಳಗಿನಂತೆ ವೆಚ್ಚ ಮಾಡಬಹುದು. ಇಲ್ಲಿ ನೀಡಿರುವ ವೆಚ್ಚದ ವಿಭಜನೆಯು ಸಲಹಾತ್ಮಕವಾಗಿದ್ದು, ಸ್ಥಳೀಯ ಸನ್ನಿವೇಶಕ್ಕನುಗುಣವಾಗಿ ಬದಲಾವಣೆಯಾಗಬಹುದು.

| ಕ್ರ.ಸಂ | ವೆಚ್ಚದ ವಿವರ | ಘಟಕ ವೆಚ್ಚ (ರೂ) (ಪ್ರತಿ ಕಿಶೋರಿಗೆ) | ಐವತ್ತು ಕಿಶೋರಿಯರಿಗೆ ತಗಲುವ ಮೊತ್ತ(ರೂ) | ಷರಾ |
|---|---|---|---|---|
| 1 | ಕಿಶೋರಿಯರಿಗೆ ನೋಟ್ ಪ್ಯಾಡ್ ಮತ್ತು ಪೆನ್ | 15 | 750 | |
| 2 | ತಿಂಡಿ (ಪ್ರತಿ ದಿನಕ್ಕೆ) | 15 | 2250 | |
| 3 | 2 ಊಟ (ಪ್ರತಿ ದಿನಕ್ಕೆ) | 40 | 6000 | |
| 5 | ಕಿಶೋರಿಯರಿಗೆ ಸರಾಸರಿ ಪ್ರಯಾಣ ಭತ್ಯೆ (ನೈಜ) | 20 | 1000 | |
| 6 | ಹಾಲು | 4 | 600 | |
| 6 | ಸಂಪನ್ಮೂಲ ವ್ಯಕ್ತಿಗಳ ವೆಚ್ಚ (ಪ್ರತಿ ದಿನಕ್ಕೆ ರೂ 50/– ರಂತೆ 3 ದಿನಕ್ಕೆ ರೂ.150/–; ಇಬ್ಬರು ಸಂ.ವ್ಯ.ಗೆ ರೂ.300/–) | | 300 | ಈ ಮೊತ್ತವನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಪಾವತಿಸುವುದು. ಈ ವೆಚ್ಚದಲ್ಲಿ ಅವರು ಸಿದ್ಧತೆಗೆ ಅಗತ್ಯವಾದ ಜೆರಾಕ್ಸ್, ಡಿಟಿಪಿ, ಪ್ರಿಂಟ್‌ಔಟ್, ಇಂಟರ್‌ನೆಟ್ ಬ್ರೌಸಿಂಗ್, ಅಂಚೆ ವೆಚ್ಚ ಇತ್ಯಾದಿಗಳಿಗಾಗಿ ಬಳಸಬಹುದು. |

| | | | | |
|---|---|---|---|---|
| 7 | ದಾಖಲೀಕರಣ | | 200 | |
| 8 | ಕಲಿಕೋಪಕರಣ | | 100 | ತರಬೇತಿಗಳಿಗೆ ಅಗತ್ಯವಾದ ಚಾರ್ಟುಗಳು, ಪೋಸ್ಟರ್‌ಗಳು ಇತ್ಯಾದಿಗಳನ್ನು ಒಮ್ಮೆ ಖರೀದಿಸಿ, ಇತರೆ ತರಬೇತಿಗಳಿಗೂ ಬಳಸಬಹುದು. |
| 9 | ಇತರೆ ವೆಚ್ಚ | | 50 | |
| | ಒಟ್ಟು | | 11,250 | |

5. ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳನ್ನು ನಡೆಸಲು ಈ ಕೆಳಗಿನಂತೆ ವೇಳಾಪಟ್ಟಿಯನ್ನು ನಿಗದಿಪಡಿಸಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

| ಕ್ರ.ಸಂ | ಕಾರ್ಯಚಟುವಟಿಕೆ | ಜವಾಬ್ದಾರಿ | ಕಾರ್ಯ ಪೂರ್ಣಗೊಳ್ಳಲು ನಿಗಧಿಪಡಿಸಿದ ಸಮಯ |
|---|---|---|---|
| 1 | ಜಿಲ್ಲಾ ಹಂತದಲ್ಲಿ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ದಿನದ ಪುನಶ್ಚೇತನ ತರಬೇತಿ | ಡಿಡಿಪಿಐ/ಡಿವೈಪಿಸಿ (ಡಯಟ್ ನೋಡಲ್ ಅಧಿಕಾರಿ ಭಾಗವಹಿಸಬೇಕು) | ಜೂನ್ 2011 |
| 2 | ಶಿಬಿರಗಳನ್ನು ಕೈಗೊಳ್ಳಲು ಬ್ಲಾಕ್‌ವಾರು ಕ್ರಿಯಾ ಯೋಜನೆ ತಯಾರಿ | ಬಿ.ಇ.ಓ./ಬಿ.ಆರ್.ಸಿ | ಜಿಲ್ಲಾ ಹಂತದ ತರಬೇತಿಯಲ್ಲಿ |
| 3 | ಬ್ಲಾಕ್‌ಗಳಿಗೆ ಅನುದಾನ ಬಿಡುಗಡೆ | ಡಿಡಿಪಿಐ/ಡಿವೈಪಿಸಿ | ಜೂನ್ 2011 |
| 4 | ಫಲಾನುಭವಿ ಕಿಶೋರಿಯರನ್ನು ಗುರುತಿಸುವಿಕೆ | ಬಿ.ಇ.ಓ./ಬಿ.ಆರ್.ಸಿ | ಜುಲೈ 2011 ರ ಮೊದಲ ವಾರ |
| 5 | ಶಿಬಿರಗಳನ್ನು ನಡೆಸುವುದು | ಬಿ.ಇ.ಓ./ಬಿ.ಆರ್.ಸಿ | ಜುಲೈ 2011 ರ ಎರಡನೇ ವಾರದಿಂದ ಸೆಪ್ಟಂಬರ್ 2011 ರವರೆಗೆ |

6. ಕಳೆದ ಬಾರಿ ನಡೆದ ತರಬೇತಿ ಪಡೆದ ಕಿಶೋರಿಯರನ್ನು ಹೊರತುಪಡಿಸಿ, ಹೊಸ ಕಿಶೋರಿಯರನ್ನು ಗುರುತಿಸಿ, ತರಬೇತಿ ನೀಡುವುದು.
7. ಶಿಬಿರಗಳನ್ನು ನಡೆಸುವುದಕ್ಕೆ ಮುಂಚೆ ಬ್ಲಾಕ್‌ಗಳಿಂದ ಶಿಬಿರಗಳ ವೇಳಾಪಟ್ಟಿ ಹಾಗೂ ಫಲಾನುಭವಿಗಳ ಪಟ್ಟಿಯನ್ನು ಜಿಲ್ಲೆಗಳು ಪಡೆಯುವುದು.
8. ಬ್ಲಾಕ್‌ಗಳು ವೇಳಾಪಟ್ಟಿಗನುಗುಣವಾಗಿ ಶಿಬಿರಗಳನ್ನು ನಡೆಸುವುದು. ವೇಳಾಪಟ್ಟಿ ಬದಲಾವಣೆಯಾದರೆ ಜಿಲ್ಲೆಗಳ ಅಧಿಕಾರಿಗಳ ಗಮನಕ್ಕೆ ತಂದು ಶಿಬಿರಗಳನ್ನು ನಡೆಸುವುದು.
9. ಶಿಬಿರಗಳು ಯಶಸ್ವಿಯಾಗಿ ನಡೆಯಲು ಡಯಟ್ ನೋಡಲ್ ಅಧಿಕಾರಿಗಳು ಅಗತ್ಯ ಸಲಹೆ, ಮಾರ್ಗದರ್ಶನ ನೀಡುವುದು.
10. ಶಿಬಿರಗಳು ನಡೆಯುವ ಸ್ಥಳಕ್ಕೆ ಡಿಡಿಪಿಐ., ಡಿ.ವೈ.ಪಿ.ಸಿ., ಡಯಟ್ ಪ್ರಾಂಶುಪಾಲರು, ಡಯಟ್‌ಗಳ ಬ್ಲಾಕ್ ನೋಡಲ್ ಅಧಿಕಾರಿಗಳು, ಎ.ಪಿ.ಸಿ., ಬಿ.ಇ.ಓ.ಗಳು ಭೇಟಿ ನೀಡಿ, ಅಲ್ಲಿ ಹೆಣ್ಣುಮಕ್ಕಳಿಗೆ ಸುರಕ್ಷಿತ ಮತ್ತು ಅನೂಕೂಲಕರ ವಾತಾವರಣ ಇರುವುದನ್ನು ಖಾತ್ರಿಪಡಿಸಿಕೊಳ್ಳುವುದು.

ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

11. ಕಳೆದ ಸಾಲಿನಲ್ಲಿ ಸನಿವಾಸ ನಡೆಸದೇ ಕೆಲವೆಡೆ ಶಿಬಿರಗಳನ್ನು ನಡೆಸಿರುವುದು ಹಾಗೂ ಪೂರ್ಣ ಪ್ರಮಾಣದಲ್ಲಿ ಶಿಬಿರಗಳನ್ನು ನಡೆಸದೇ ಇರುವುದು ಗಮನಕ್ಕೆ ಬಂದಿದ್ದು, ಈ ಬಾರಿ ಆ ರೀತಿ ಆಗದಂತೆ ಎಚ್ಚರಿಕೆ ವಹಿಸಲು ತಿಳಿಸಿದೆ.
12. ಶಿಬಿರಗಳು ಕಳೆದ ಸಾರಿ ನಡೆಸಿದ ರೀತಿಯಲ್ಲಿಯೇ ಉದ್ಘಾಟನೆ, ಕಿಶೋರಿಯರ ಭಾಗವಹಿಸುವಿಕೆಯ ಮೂಲಕ ನಡೆಯಬೇಕು. ಉಪನ್ಯಾಸಗಳನ್ನು ನೀಡಬಾರದು. ಕಿಶೋರಿಯರು ಅವರ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡಬೇಕು. ಶಿಬಿರಗಳಲ್ಲಿ ಮಹಿಳಾ ಸಂಪನ್ಮೂಲ ವ್ಯಕ್ತಿಗಳು ಇರಬೇಕು.
13. ಸ್ಥಳೀಯ ಮಹಿಳಾ ವೈದ್ಯರು/ಸ್ತ್ರೀರೋಗ ತಜ್ಞರನ್ನು ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತೊಡಗಿಸಿಕೊಳ್ಳಬೇಕು. ಈ ಸಂಬಂಧ, ಸಾಕಷ್ಟು ಮುಂಚೆ ಶಿಬಿರಗಳ ವೇಳಾಪಟ್ಟಿಯನ್ನು ಅವರಿಗೆ ನೀಡಿ, ಶಿಬಿರದಲ್ಲಿ ಭಾಗವಹಿಸಲು ಕೋರಿಕೊಳ್ಳಬೇಕು. ಆರೋಗ್ಯ ಇಲಾಖೆಯಲ್ಲೂ ಶಾಲಾ ಆರೋಗ್ಯ ಶಿಕ್ಷಣ ಎಂಬ ಕಾರ್ಯಕ್ರಮ ಇದ್ದು, ಆ ಕಾರ್ಯಕ್ರಮದ ಮೂಲಕ ಕಿಶೋರಿಯರಿಗೆ ಏಡ್ಸ್, ಋತುಸ್ರಾವ ಅವದಿಯ ಸ್ವಚ್ಛತೆ ಇತ್ಯಾದಿಗಳ ಬಗ್ಗೆ ಅಗತ್ಯ ಮಾಹಿತಿ ಒದಗಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ವೈದ್ಯರಿಂದ ಕಿಶೋರಿಯರಿಗೆ ಉಪನ್ಯಾಸ, ಸಂವಾದ, ಆಪ್ತಸಲಹೆಯನ್ನು ಕೊಡಿಸಬೇಕು.
14. ಶಿಬಿರಗಳ ಫೋಟೋ ಒಳಗೊಂಡ ಕಿಶೋರಿಯರ ಹಿಮ್ಮಾಹಿತಿ ಸಹಿತ ದಾಖಲೀಕರಣವನ್ನು ಮಾಡಬೇಕು. ಜಿಲ್ಲೆಗಳು ಬ್ಲಾಕ್‌ಗಳಿಂದ ಭೌತಿಕ, ಆರ್ಥಿಕ ಪ್ರಗತಿ, ಶಿಬಿರಗಳ ಉಪಯುಕ್ತತೆಯ ಬಗ್ಗೆ ಕಿಶೋರಿಯರ ಹಿಮ್ಮಾಹಿತಿ ಹಾಗೂ ಉತ್ತಮ ಫೋಟೋಗಳನ್ನೊಳಗೊಂಡ ಕ್ರೋಢೀಕೃತ ವರದಿಯನ್ನು ರಾಜ್ಯ ಕಛೇರಿಗೆ ಸೆಪ್ಟೆಂಬರ್ 2011 ರ ಅಂತ್ಯದೊಳಗೆ ಸಲ್ಲಿಸುವುದು.
15. ಒಟ್ಟಿನಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರಗಳು ಹೆಣ್ಣುಮಕ್ಕಳಿಗೆ ಅಗತ್ಯವಾದ ಜಾಗೃತಿ ಮೂಡಿಸುವುದರ ಜೊತೆ ಅವರ ಸಬಲೀಕರಣಕ್ಕೂ ಕಾರಣವಾಗುವಂತೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ